ನಿಮ್ಮೊಡನೆ

# ಸಣ್ಣ ಸಣ್ಣ 'ಖುಷಿ' ಕಸಿಯಬೇಡಿ

ಮನರಂಜನೆಯ ಬಹುಮುಖ್ಯ ಮಾಧ್ಯಮವಾಗಿ ಸಿನಿಮಾ ನಮ್ಮಲ್ಲಿ ಇವತ್ತಿಗೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ. ಮೂರು ತಾಸು ಮೈಮರೆಸುವ ಒಂದು ಸಿನಿಮಾ ನೋಡಲು ನಾವು ಕೊಡುತ್ತಿದ್ದ ಹಣ ಬರೀ ಐವತ್ತೋ ಅರವತ್ತೋ ರೂಪಾಯಿ ಆಗಿತ್ತು. ಮಲ್ಟಿಪ್ಲೆಕ್ಸ್‌ಗಳು ತಲೆ ಎತ್ತುವವರೆಗೂ ಬೆಂಗಳೂರಿನಂಥ ಮಹಾನಗರಗಳಲ್ಲಿ ಸಹ ಸರಿಸುಮಾರು ಇದೇ ಬಗೆಯ ದರಪಟ್ಟಿ ಇತ್ತು. ಆದರೆ ಆ ಸಹನೀಯ ಸ್ಥಿತಿ ಈಗ ಉಳಿದಿಲ್ಲ. ಏಕಪರದೆಯ ಚಿತ್ರಮಂದಿರಗಳು (ಸಿಂಗಲ್ ಸ್ಕ್ರೀನ್) ಕಾಣೆಯಾಗುತ್ತಿವೆ. ಅವುಗಳ ಜಾಗದಲ್ಲಿ ಮಾಲ್‌ಗಳು ಮೇಲೇಳುತ್ತಿವೆ. ಮಾಲ್ ಎಂದಮೇಲೆ ಅಲ್ಲಿ ಬಹುಪರದೆಯ ಚಿತ್ರಮಂದಿರ ಸಮೂಹ ಇದ್ದೇ ಇರುತ್ತದೆ. ಇರಲಿ. ಅದೂ ಬೇಕು. ಬದಲಾವಣೆ ಬದುಕಿನ ನಿಯಮ. ಆದರೆ ಸಿನಿಮಾ ನೋಡುವುದನ್ನು ಕೂಡ ದುಬಾರಿ ಹವ್ಯಾಸ ಎನ್ನುವಮಟ್ಟಿಗೆ ದರಪಟ್ಟಿಯನ್ನು ಅಲ್ಲಿ ತುಟ್ಟಿಗೊಳಿಸಿರುವುದು ಮಾತ್ರ ಅಸಹನೀಯ. ನೀವೇನಾದರೂ ಮೊದಲ ಸಲ, ಅದೂ ವಾರಾಂತ್ಯದಲ್ಲಿ ಮಲ್ಟಿಪ್ಲೆಕ್ಸ್‌ಗೆ ಹೋದವರಾದರೆ ಟಿಕೆಟ್ ದರ ನೋಡಿದಾಕ್ಷಣ ಬೆಸ್ತು ಬೀಳುವುದು ಗ್ಯಾರಂಟಿ. ಇನ್ನು ತಿಂಡಿ, ಪೇಯಗಳ ದರಪಟ್ಟಿ ನೋಡಿದರಂತೂ ಹವಾನಿಯಂತ್ರಣದ ಅಂಗಳದಲ್ಲೂ ಮುಖದ ಬೇಲೆ ಬೆವರ ಹನಿ ಕಾಣಿಸುವುದು ಶತಃಸಿದ್ಧ. ಚಿತ್ರಮಂದಿರಗಳ ನಿರ್ವಹಣೆ ಚೆನ್ನಾಗಿದೆ. ಸ್ವಚ್ಛತೆ ಕಾಪಾಡಿರುತ್ತಾರೆ. ಎಲ್ಲವೂ ಸರಿ. ಆದರೆ ವಿಪರೀತ ದರ ನಿಗದಿಗೊಳಿಸುವ ಮೂಲಕ ಸಿನಿಮಾದಂಥ ಒಂದು ಸಣ್ಣ 'ಖುಷಿ'ಯನ್ನು ಕೂಡ ಜನಸಾಮಾನ್ಯರಿಂದ ಕಸಿಯುವುದಿದೆಯಲ್ಲ, ಅದನ್ನು ನಮ್ಮಲ್ಲಿ ಇರುವಂಥ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯಲ್ಲಿ ಸುತರಾಂ ಒಪ್ಪಲಾಗದು.

ಇಬ್ಬರು ಮಕ್ಕಳನ್ನು ಹೊಂದಿರುವ ಪುಟ್ಟ ಕುಟುಂಬ ಮಲ್ಟಿಪ್ಲೆಕ್ಸ್‌ನಲ್ಲಿ ಸಿನಿಮಾ ನೋಡಬೇಕೆಂದರೆ ನಾಲ್ಕೈದು ಸಾವಿರ ರೂಪಾಯಿ ಬಿಚ್ಚಬೇಕಾಗುತ್ತದೆ. ಟಿಕೆಟ್ ದರ, ತಿಂಡಿ–ಪೇಯಗಳ ದರ, ಪಾರ್ಕಿಂಗ್ ಶುಲ್ಕ... ಒಂದಕ್ಕಿಂತ ಒಂದು ದುಬಾರಿ. ಅದರೊಂದಿಗೆ, ಹೊರಗಿನಿಂದ ತಿಂಡಿ–ತಿನಿಸು ತರಬಾರದು ಎಂಬ ನಿರ್ಬಂಧ ಬೇರೆ! ಸಿನಿಮಾ ಮತ್ತು ಪಾಪ್‌ಕಾರ್ನ್ ನಡುವೆ ಈಗಂತೂ ಬಿಡಿಸಲಾಗದ ನಂಟು ಏರ್ಪಟ್ಟಿದೆ. ಪಾಪ್‌ಕಾರ್ನ್ ಬಾಯಿಗೆ ಹಾಕಿಕೊಳ್ಳುತ್ತಾ ಸಿನಿಮಾ ನೋಡುವುದು ಒಂದು ರೀತಿ 'ಕಲ್ಚರ್' ಆಗಿ ಮಾರ್ಪಟ್ಟಿದೆ. ಒಂದು ಟಬ್ ಪಾಪ್‌ಕಾರ್ನ್‌ಗೆ ಅದರ ಪ್ರಮಾಣಾನುಸಾರ ₹ 150 ರಿಂದ 300ರ ವರೆಗೂ ದರ ನಿಗದಿಗೊಳಿಸಿರುತ್ತಾರೆ. ಪೇಯಗಳ ದರ ಕಥೆಯೂ ಇದಕ್ಕಿಂತ ಭಿನ್ನವಲ್ಲ. ಪಾಪ್‌ಕಾರ್ನ್ ಘಮಲು ಮೂಗಿಗೆ ಬಡಿಯುತ್ತಲೇ ಮಕ್ಕಳ ಕಣ್ಣು ಅರಳುತ್ತದೆ. ಕೊಡಿಸಲು ಹೋದರೆ ಪೋಷಕರ ಹೊಟ್ಟೆಯಲ್ಲಿ ಸಂಕಟ ಶುರುವಾಗುತ್ತದೆ. ಒಮ್ಮೆ ಬಡವರ ಆಹಾರವಾಗಿದ್ದ ಈ ಜೋಳ, ಮಲ್ಟಿಪ್ಲೆಕ್ಸ್‌ಗಳಲ್ಲಿ ಈಗ ಪ್ರತಿಷ್ಠೆಯ ಪ್ರತೀಕವಾಗಿ ಮಾರ್ಪಟ್ಟಿರುವುದು ಸೋಜಿಗದ ಸಂಗತಿ. ದರ ಸಹನೀಯಗೊಳಿಸುವ ಮೂಲಕ ಹೆಚ್ಚು ಜನರನ್ನು ಸೆಳೆಯಲು ಅವಕಾಶ ಇದೆ. ಅದರಿಂದ ಮಾಲ್‌ನಲ್ಲಿ ಬೇರೆ ವ್ಯಾಪಾರ–ವಹಿವಾಟು ವೃದ್ಧಿಗೂ ಅನುಕೂಲ ಆಗಲಿದೆ. ಆದರೆ ಸಂಬಂಧಪಟ್ಟವರು ಏಕೋ ಅದರತ್ತ ಲಕ್ಷ್ಯ ವಹಿಸುತ್ತಿಲ್ಲ.

ಈ ದುಬಾರಿ ದರ ಬಗೆಗಿನ ಜನರ ಗೊಣಗಾಟ ಕೊನೆಗೂ ಮಹಾರಾಷ್ಟ್ರ ಸರ್ಕಾರದ ಕಿವಿಗೆ ಬಿದ್ದಿದೆ. ಹೊರಗಿನ ತಿಂಡಿ–ತಿನಿಸುಗಳಿಗೆ ನಿರ್ಬಂಧ ಹೇರುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಲ್ಲಿನ ಆಹಾರ ಸಚಿವರು ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು ಈ ಸಂಬಂಧ ಬಾಂಬೆ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿದೆ. ತೀರ್ಪು ಇನ್ನೂ ಬರಬೇಕಿದೆ. ಆದರೆ ಹೊರಗಿನ ತಿಂಡಿ–ತಿನಿಸುಗಳಿಗೆ ನಿರ್ಬಂಧ ಹೇರಿರುವುದಕ್ಕೆ ಭದ್ರತೆಯ ಕಾರಣ ಮುಂದೊಡ್ಡಿರುವುದನ್ನು ಒಪ್ಪಲಾಗದು ಎಂದು ಕೋರ್ಟ್ ಅಭಿಪ್ರಾಯಪಟ್ಟಿರುವುದು ಸಮಂಜಸವಾಗಿಯೇ ಇದೆ. ಮಾಲ್‌ಗಳಲ್ಲಿ ಸೆಕ್ಯುರಿಟಿ, ಲೋಹ ಶೋಧಕ ಅಳವಡಿಕೆ ಮುಂತಾದ ನೆಪಗಳನ್ನು ದುಬಾರಿ ದರಕ್ಕೆ ಕಾರಣವಾಗಿ ಹೇಳುತ್ತಿರುವುದು ಸರಿಯಲ್ಲ. ಮುಂಬೈ ಮಾತ್ರವಲ್ಲ, ಕರ್ನಾಟಕದ ಬಹುತೇಕ ನಗರಗಳಲ್ಲೂ ಮಲ್ಟಿಪ್ಲೆಕ್ಸ್‌ಗಳ ದುಬಾರಿ ದರಗಳನ್ನು ನಿಯಂತ್ರಿಸಬೇಕಿದೆ. ಮಲ್ಟಿಪ್ಲೆಕ್ಸ್‌ಗಳು ಪ್ರೇಕ್ಷಕಸ್ನೇಹಿ ಆಗಬೇಕಿದೆ.

■ ಎನ್. ಉದಯಕುಮಾರ್

ಇಬ್ಬರು ಮಕ್ಕಳನ್ನು ಹೊಂದಿರುವ ಪುಟ್ಟ ಕುಟುಂಬ ಮಲ್ಟಿಪ್ಲೆಕ್ಸ್‌ನಲ್ಲಿ ಸಿನಿಮಾ ನೋಡಬೇಕೆಂದರೆ ನಾಲ್ಕೈದು ಸಾವಿರ ರೂಪಾಯಿ ಬಿಚ್ಚಬೇಕಾಗುತ್ತದೆ. ಟಿಕೆಟ್ ದರ, ತಿಂಡಿ–ಪೇಯಗಳ ದರ, ಪಾರ್ಕಿಂಗ್ ಶುಲ್ಕ... ಒಂದಕ್ಕಿಂತ ಒಂದು ದುಬಾರಿ. ಅದರೊಂದಿಗೆ, ಹೊರಗಿನಿಂದ ತಿಂಡಿ–ತಿನಿಸು ತರಬಾರದು ಎಂಬ ನಿರ್ಬಂಧ ಬೇರೆ!



ಈಶ್ವರ್